ರಾಘವೇಂದ್ರ ದೇಸಾಯಿ, ರಾಯಚೂರು
*ಹಿಂದಿನ ಮಹಾನ್ ವ್ಯಕ್ತಿಗಳ ಭಾವ ಚಿತ್ರವನ್ನು ಎಲ್ಲಾ ಇಲಾಖೆಗಳಲ್ಲಿ ಹಾಕಿದಂತೆ ಈಗಿನ ಕುಖ್ಯಾತ ರಾಜಕಾರಣಿಗಳವನ್ನು ಎಲ್ಲಿ ತೂಗು ಹಾಕಬೇಕು?*





ಬಸ್‌ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ಪೊಲೀಸ್ ಠಾಣೆಗಳಲ್ಲಿ ದೇಶಗಳ್ಳರಿದ್ದಾರೆ ಎಚ್ಚರ ತಲೆಬರಹದ ಅಡಿಯಲ್ಲಿ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ನಾನು ಒಬ್ಬಳಿಗೆ ಬಡ್ಡಿ ಸಮೇತ ಹಿಂದಿರುಗಿಸುವ ಶರತ್ತಿನ ಮೇಲೆ ಕೊಟ್ಟಿದ್ದೇನೆ. ಆದರೆ ಈಗ ಅವಳು ವಾಪಸ್ ಕೊಡುತ್ತಲೇ ಇಲ್ಲವಲ್ಲಾ...?*
ಸಾಲ ಮನ್ನಾ ಆಗಿದೆಯಂತೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ದೇವನೊಬ್ಬನೇ ಆದರೂ ನಾಮ ಹಲವು ಏಕೆ?*
ಅವರಿವರಿಗೆ ಹಾಕಲು!

ಎಸ್. ಶ್ರೀಧರ್, ಬೆಂಗಳೂರು
*ಕಲ್ಪನೆಗೂ, ವಾಸ್ತವಕ್ಕೂ ಏನು ವ್ಯತ್ಯಾಸ?*
ರೆಪ್ಪೆಯಷ್ಟೇ ವ್ಯತ್ಯಾಸ; ರೆಪ್ಪೆ ಮುಚ್ಚಿದರೆ ಕಲ್ಪನೆ, ತೆರೆದರೆ ವಾಸ್ತವ!

ನರಸಿಂಹ ಎಂ. ಪೈ, ಕಾಸರಕೋಡ
*ಹೆಣ್ಣಿಗೂ, ಹಳದಿ ಲೋಹಕ್ಕೂ ಯಾವ ಸಂಬಂಧ?*



ಒಲ್ಲೆನಲು ಓಲೆ, ಝುಂ ಎಂದಿರಲು ಝುಂಕಿ, ಸರಸರನೆ ಸರಿಯಲು ಸರ, ಅಬಲೆಯಲ್ಲವೆನಲು ಬಳೆ.... ಹೇಮ ಹೆಚ್ಚಿದಷ್ಟೂ ಪ್ರೇಮ ಹೆಚ್ಚು!

ಆರ್. ಮಧುಸೂದನ್, ಹಾಸನ
*ಗಂಡುಮಗುವೇ ಬೇಕೆಂದು ತಂದೆತಾಯಿಗಳು ದೇವರಲ್ಲಿ ಹರಕೆ ಹೊರುವುದೇಕೆ?*
ಅಳಿಯ ತೋರ್ಸೋ ಶ್ರದ್ಧೆಗಿಂತ ಮಗ ಮಾಡೋ ಶ್ರಾದ್ಧವೇ ಶ್ರೇಷ್ಠ ಎಂಬ ಅಭಿಪ್ರಾಯ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಸಿನಿಮಾ ಥಿಯೇಟರ್‌ಗಳಿಗೆ ಹೆಚ್ಚಾಗಿ ದೇವರ ಅಥವಾ ಹೆಣ್ಣಿನ ಹೆಸರಿಡಲು ಕಾರಣವೇನು?*
ಕಲೆಕ್ಷನ್ ಹೆಣ್ಣಿನಷ್ಟೇ ಚಂಚಲ, ಚಿತ್ರಗಳು ದೇವ್ರೇ ಗತಿಯಾದ್ದರಿಂದ!

ಡಿ.ಎಲ್. ಚಂದ್ರಿಕಾ, ಚನ್ನಗಿರಿ
*ಮೋಸಕ್ಕೆ ಬೆಲೆ ಕೊಡುವ ಈ ದಿನಗಳಲ್ಲಿ ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳುವುದು ಹೇಗೆ?*
ಐಟಂ ಸಾಂಗ್, ಬ್ರೇಕ್‌ಡ್ಯಾನ್ಸ್‌ಗಳ ಮಧ್ಯದಲ್ಲೂ ಭರತನಾಟ್ಯವನ್ನು ಕಾಯ್ದುಕೊಂಡಂತೆ!

ವಿದ್ಯಾ ನಾಗ್, ಬೆಂಗಳೂರು
*ಇದೇ ನನ್ನ ಉತ್ತರ, ಕೊಡುವೆ ಬಾರೆ ಹತ್ತಿರ ಎಂದು ಸಿನಿಮಾ ಹಾಡೊಂದಿದೆ. ನಿಮ್ಮ ಹತ್ತಿರ ಬಂದರೆ ನೀವು ಏನು ಕೊಡುವಿರಿ?*
ಕಚಗುಳಿ – ಮನಕ್ಕೆ!

ಕುಮಾರ ಚಲವಾದಿ, ಹೊಳೆನರಸಿಪುರ
*ಕತ್ತಿಯ ಅಲಗಿಗೆ ಹೆಣ್ಣಿನ ನಾಲಿಗೆಯನ್ನು ಏಕೆ ಹೋಲಿಸಬೇಕು?*
ಎರಡೂ ಆಗಾಗ್ಗೆ ಮೊಂಡು ಹಿಡಿಯುವುದರಿಂದ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಹುಡುಗರು ಹಾಟ್ ಕಡೆ, ಹುಡುಗಿಯರು ಕೂಲ್ ಕಡೆ; ಇದು ನಿಜವೇ ರಾಮ್?*
ಕರೆಕ್ಟ್; ಹುಡುಗಿಯರು ಹಾಟ್, ಹುಡುಗರು ಕೂಲ್. ಆದ್ದರಿಂದ ಅವರು ಇವರ ಕಡೆ, ಇವರು ಅವರ ಕಡೆ!

ಎ.ಕೆ. ಪಟ್ಟಾಭಿ, ಬೆಂಗಳೂರು
*ರಾಮನ ಲೆಕ್ಕ, ಕೃಷ್ಣನ ಲೆಕ್ಕಗಳಲ್ಲಿ ನಾವು ಯಾವ ಲೆಕ್ಕ ಕಲಿತರೆ ನಮ್ಮ ಬದುಕು ಸುಧಾರಿಸೀತು?*
ರಾಮನ ಲೆಕ್ಕವಾದರೆ ವನವಾಸವೇ ಗತಿ; ಕೃಷ್ಣನ ಲೆಕ್ಕವಾದರೆ ಧನಕ್ಕೂ ಸೈ, (ಸ)ದನಕ್ಕೂ ಸೈ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಸರ್ವಶಕ್ತ, ಸರ್ವಾಂತರ್ಯಾಮಿಯಾದ ಪರಮಾತ್ಮನಿಗೆ ಹಣೆಬರಹ ಅಳಿಸಿ ಹೊಸದಾಗಿ ಬರೆಯುವ ಶಕ್ತಿ ಏಕಿಲ್ಲ?*
ಬರೆಯಬಹುದಿತ್ತು; ಆದರೆ ನಮ್ಮ ಹಣೆ ಒಮ್ಮೆ ಮಾತ್ರ ಬರೆಯಲು ಬಳಸಬಹುದಾದ ಯೂಸ್ ಎಂಡ್ ಥ್ರೋ ಪ್ರಾಡಕ್ಟ್!

## ಬಹುಮಾನಿತ ಪ್ರಶ್ನೆ

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ರಾವಣನಂತೆ ದಶಕಂಠನಾಗಿದ್ದರೆ ಹೇಗೆ ಉತ್ತರ ಕೊಡುತ್ತಿದ್ದಿರಿ?*
ದೈತ್ಯಪ್ರತಿಭೆಯಲ್ಲವೇ! ಏಕಕಾಲಕ್ಕೆ ಹತ್ತು ಭಾಷೆಗಳಲ್ಲಿ ಹತ್ತು ಬೇರೆ ಬೇರೆ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದೆ!

ಕೇಶವ ಎನ್. ಪೈ, ಕಾಸರಕೋಡ
*ಹೆಣ್ಣು ಮಾಯೆ. ಮದುವೆಯ ಮೊದಲೋ, ನಂತರವೋ?*
ಮೊದಲೇ; ನಂತರ ಮಾಯೆ ಅಲ್ಲ, ಬರೀ ಬಾಯೇ!

ಶಿವಮೊಗ್ಗ ರಮೇಶ್, ಬೆಂಗಳೂರು
*ಓಶೋ ರಜನೀಶ್‌ಗೂ, ಕಾಮಿ ನಿತ್ಯಾನಂದನಿಗೂ ಬಹಳಷ್ಟು ಹೋಲಿಕೆ ಇದೆ ಅನ್ನಿಸುವುದಿಲ್ಲವೆ?*
ನಿಜ. ಆದರೆ ಓಶೋದು ಮುಕ್ತ, ನಿತ್ಯಾನಂದನದು ಗುಪ್ತ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
ಬಡವನು ಮಾಡುವ ದಾನಕ್ಕೂ, ಸಿರಿವಂತನು ಮಾಡುವ ದಾನಕ್ಕೂ ಇರುವ ವ್ಯತ್ಯಾಸವೇನು?




ಬಡವನು ಮಾಡುವುದು ಆತ್ಮಸಂತೋಷಕ್ಕೆ; ಸಿರಿವಂತ ಟ್ಯಾಕ್ಸ್ ಬೆನಿಫಿಟ್‌ಗೆ!

ವಿ.ಹೇಮಂತಕುಮಾರ್, ಬೆಂಗಳೂರು
*ಪತಿವ್ರತೆಯರ ಹೆಸರು ಹೇಳಿ ಎಂದರೆ ಯಾರೂ ತನ್ನ ಹೆಂಡತಿಯ ಹೆಸರು ಹೇಳುವುದಿಲ್ಲವೇಕೆ?*
ಹೆಂಡತಿಯ ಹೆಸರು ಮಾತ್ರ ಹೇಳಿದರೆ ಅಮ್ಮ, ಅಕ್ಕ, ತಂಗಿ, ಅತ್ತೆ, ನಾದಿನಿ, ಅಜ್ಜಿ ಎಲ್ಲರೂ ಜಗಳಕ್ಕೆ ಬರುವುದರಿಂದ!

ಬಿ.ವಿ. ನಾರಾಯಣ್, ಬೆಳಗೊಳ
*ಪ್ರಪಂಚಕ್ಕೆ ಅರ್ಥವಾಗುವ ಭಾಷೆ ಯಾವುದು?*
ಹಸಿವೆಯ ನೋಟ!

ಪಿ. ಗೋವಿಂದರಾಜ್, ಶಿವಮೊಗ್ಗ
*ಕನ್ನಡಿ ಮತ್ತು ಸ್ತ್ರೀ ಇಲ್ಲದೆ ಲೋಕ ಸೃಷ್ಟಿಯಾಗಿದ್ದರೆ ಹೇಗೆ ಇರುತ್ತಿತ್ತು?*
ಷುಗರ್‌ಲೆಸ್ ಕಬ್ಬಿನಂತೆ!

■ ರಾಮ್